# 'ಶ್ರೀರಾಮಕೃಷ್ಣ ವಚನವೇದ'
# ಭಾವಧಾರೆ - 8

ಸ್ವಾಮಿ ನಿತ್ಯಸ್ಥಾನಂದ

## ನಾಲ್ಕು ಬಗೆಯ ಜನ

ಈಗ ಶ್ರೀರಾಮಕೃಷ್ಣರ ನುಡಿಯನ್ನು ಆಲಿಸೋಣ: ''ಜೀವರಲ್ಲಿ ನಾಲ್ಕು ವಿಧ : ಬದ್ಧ, ಮುಮುಕ್ಷು, ಮುಕ್ತ, ನಿತ್ಯ. ನಿತ್ಯ ಮುಕ್ತರು ನಾರದಾದಿಗಳು. ಇವರು ಈ ಪ್ರಪಂಚದಲ್ಲಿರುವುದು ದೇವರ ಮಂಗಳಕ್ಕಾಗಿ, ಜೀವರಿಗೆ ಶಿಕ್ಷಣ ಕೊಡಲೋಸುಗ. ಬದ್ಧ ಜೀವರು ವಿಷಯಾಸಕ್ತರಾಗಿರುತ್ತಾರೆ. ಭಗವಂತನನ್ನು ಮರೆತು ಇರುತ್ತಾರೆ. ಮರೆತು ಕೂಡ ಭಗವಂತನನ್ನು ನೆನೆಯುವುದಿಲ್ಲ. ಮುಮುಕ್ಷು ಜೀವರು ಎಂದರೆ ಮುಕ್ತರಾಗಲು ಇಚ್ಛೆಪಡುವವರು. ಆದರೆ ಇವರಲ್ಲಿ ಕೆಲವರು ಜಯಶೀಲರಾಗುತ್ತಾರೆ. ಇನ್ನು ಕೆಲವರು ಆಗುವುದಿಲ್ಲ. ಮುಕ್ತ ಜೀವರು ಈ ಪ್ರಪಂಚದಿಂದ ಬಂಧಿತರಾಗದವರು — ಉದಾಹರಣೆಗೆ ಸಾಧು ಮಹಾತ್ಮರೂ ಇವರ ಹೃದಯದಲ್ಲಿ ವಿಷಯಬದ್ಧತೆ ಲೇಶಮಾತ್ರವೂ ಇರದು. ಸರ್ವದಾ ಹರಿಪಾದಪದ್ಮ ಚಿಂತನೆ ಮಾಡುತ್ತಿರುತ್ತಾರೆ.

''ಮೀನು ಹಿಡಿಯಲು ಕೆರೆಗೆ ಬಲೆ ಹಾಕುತ್ತಾರೆ. ಕೆಲವು ಮೀನುಗಳು ಅಂಥ ಬುದ್ಧಿಶಾಲಿಗಳು, ಬಲೆಗೆ ಬೀಳುವುದೇ ಇಲ್ಲ. ಅವನ್ನು ನಿತ್ಯಜೀವರಿಗೆ ಹೋಲಿಸಬಹುದು. ಆದರೆ ಬಹುಭಾಗ ಮೀನು ಬಲೆಗೆ ಬೀಳುತ್ತವೆ. ಅವುಗಳಲ್ಲಿ ಕೆಲವು ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುತ್ತವೆ. ಅವನ್ನು ಮುಮುಕ್ಷು ಜೀವರಿಗೆ ಹೋಲಿಸಬಹುದು. ಆದರೆ ಎಲ್ಲವೂ ತಪ್ಪಿಸಿಕೊಂಡು ಹೋಗಲಾರವು. ಎಲ್ಲೋ ಕೆಲವು 'ತಪಕ್, ತಪಕ್' ಅಂತ ಶಬ್ದ ಮಾಡಿ ಬಲೆಯಿಂದ ನೆಗೆದುಬಿಡುತ್ತವೆ. ಆ ಬೆಸ್ತ ಕೂಗಿಕೊಳ್ಳುತ್ತಾನೆ: 'ನೋಡಿಲ್ಲಿ! ದೊಡ್ಡದೊಂದು ಮೀನು ತಪ್ಪಿಸಿಕೊಂಡು ಹೋಗುತ್ತಿರುವುದು?' ಆದರೆ ಬಲೆಗೆ ಬಿದ್ದ ಅಧಿಕಾಂಶ ತಪ್ಪಿಸಿಕೊಳ್ಳಲಾರವು. ತಪ್ಪಿಸಿಕೊಳ್ಳಲು ಪ್ರಯತ್ನವನ್ನೂ ಮಾಡುವುದಿಲ್ಲ. ಅದಕ್ಕೆ ಬದಲು ಬಲೆಯನ್ನು ಕಚ್ಚಿಕೊಂಡು ಕೆಸರಿನೊಳಕ್ಕೆ ಹೋಗಿ ಸುಮ್ಮನೆ ಯೋಚಿಸುತ್ತವೆ, 'ಇನ್ನು ಭಯಪಡಬೇಕಾದ್ದೇನಿಲ್ಲ, ಸುರಕ್ಷಿತವಾಗಿದ್ದೇವೆ ಇಲ್ಲಿ' ಅಂತ. ಆದರೆ ಅವಕ್ಕೆ ಗೊತ್ತಿಲ್ಲ ಬೆಸ್ತ ಸರ್ ಅಂತ ಬಲೆ ಎಳೆದು ತಮ್ಮನ್ನು ಹೊರಕ್ಕೆ ಹಾಕುತ್ತಾನೆ ಎಂಬುದು. ಇವನ್ನೇ ಬದ್ಧಜೀವರಿಗೆ ಹೋಲಿಸಬಹುದು.''

**ಉಪಮಾ ಕಾಳಿದಾಸಸ್ಯ** ಎಂಬ ಮಾತಿದೆ; **ಉಪಮಾ ಶ್ರೀರಾಮಕೃಷ್ಣಸ್ಯ** ಎಂದು ಹೇಳುವುದು ಉಚಿತ ಎಂಬ ಅಭಿಪ್ರಾಯವನ್ನು ಒಬ್ಬರು ಸ್ವಾಮಿಗಳು ವ್ಯಕ್ತಪಡಿಸಿದ್ದಾರೆ. ನಾಲ್ಕು ಬಗೆಯ ಜೀವಿಗಳನ್ನು ಮೀನು ಹಿಡಿಯುವ ಪ್ರಕ್ರಿಯೆಯೊಂದಿಗೆ ಹೋಲಿಸಿ ಎಷ್ಟು ಸುಂದರವಾಗಿ ವಿವರಿಸಿದ್ದಾರೆ!

ಬಂಧನದ ಅರಿವು ಮತ್ತು ಮುಕ್ತಿಯ ಬಯಕೆ — ಇದು ನಿಜವಾಗಿಯೂ ಮನುಷ್ಯತ್ವದ ಲಕ್ಷಣ. ಜೈಲಿನಲ್ಲಿರುವವನಿಗೆ ತಾನು ಬಂಧನದಲ್ಲಿದ್ದೇನೆಂಬ ಅರಿವೇ ಇಲ್ಲದಿದ್ದರೆ ಅದರಿಂದ ಹೊರಬರುವ ಪ್ರಯತ್ನವನ್ನೇ ಮಾಡುವುದಿಲ್ಲ. ಅನೇಕರು ದೇಹೇಂದ್ರಿಯಮನಸ್ಸುಗಳ ಪಂಜರದೊಳಗಿದ್ದು ಅಲ್ಲಿಯೇ ಸುಖವನ್ನು ಅನುಭವಿಸುತ್ತ ತಾವು ಬಂಧನದಲ್ಲಿರುವೆವೆಂಬುದನ್ನೇ ಮರೆತಿರುತ್ತಾರೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸ್ವಾಮಿ ಯತೀಶ್ವರಾನಂದರು ಒಂದು ಹಾಸ್ಯ ಪ್ರಸಂಗವನ್ನು ಪ್ರಸ್ತಾಪಿಸುತ್ತಾರೆ. ಒಂದು ಖನಿಜದ ಗಣಿಯಲ್ಲಿ ಕೆಲಸ ಮಾಡುತ್ತಿದ್ದ ಗಣಿಗಾರನಿಗೆ ಹುಚ್ಚು ಹಿಡಿಯಿತು. ಅವನನ್ನು ಒಂದು ಪ್ರಸಿದ್ಧ ಹುಚ್ಚಾಸ್ಪತ್ರೆಗೆ ಸೇರಿಸಲಾಯಿತು. ಕೆಲವು ತಿಂಗಳುಗಳ ನಂತರ ಆತನ ಸ್ನೇಹಿತನು ಅವನನ್ನು ನೋಡಲು ಆಸ್ಪತ್ರೆಗೆ ಹೋದನು. ಆತನನ್ನು ಮಾತನಾಡಿಸಿದಾಗ ಸ್ನೇಹಿತನಿಗೆ ತಿಳಿದುಬಂತು ಅವನು ಸಂಪೂರ್ಣ ವಾಸಿಯಾಗಿದ್ದಾನೆ ಎಂದು. ''ಮತ್ತೆ ಯಾವಾಗ ಗಣಿ ಕೆಲಸಕ್ಕೆ ಬರುತ್ತೀಯಾ?'' ಎಂದು ಸ್ನೇಹಿತನು ಆತನನ್ನು ಕೇಳಿದನು. ''ಏನು! ನನಗೇನು ಹುಚ್ಚು ಎಂದುಕೊಂಡೆಯಾ, ಇಷ್ಟು ಒಳ್ಳೆ ಜಾಗ ಬಿಟ್ಟು ಅಲ್ಲಿಗೆ ಬರುವುದಕ್ಕೆ!'' ಎಂದನಾತ. ಹೀಗೆಯೇ ನಾವು ಕೂಡ ಜಗತ್ತೆಂಬ ಹುಚ್ಚಾಸ್ಪತ್ರೆಯಲ್ಲಿ ಸುಖವಾಗಿದ್ದೇವೆ.

ಪ್ರಾಪಂಚಿಕ ವಿಷಯದಲ್ಲಿಯೇ ನಾವೇಕೆ ತೃಪ್ತರಾಗಿರಬಾರದು, ಮುಕ್ತಿಯನ್ನು ಏಕೆ ಬಯಸಬೇಕು? ಮನುಷ್ಯನ ಸ್ವಭಾವ ಅನಂತವಾದುದು, ಆದ್ದರಿಂದ ಅನಂತದಲ್ಲಿಯೇ ನಿಜವಾದ ಸುಖ. **ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ** — ''ಭೂಮವಾದುದೇ ಸುಖ, ಅಲ್ಪದರಲ್ಲಿ ಸುಖವಿಲ್ಲ'' ಎಂದು ಛಾಂದೋಗ್ಯ ಉಪನಿಷತ್ತು ಹೇಳುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, ಮನುಷ್ಯನನ್ನು ಸ್ವರ್ಗದಲ್ಲಿಯೇ ಇರಿಸಿದರೂ, ಕೆಲಕಾಲದನಂತರ, 'ನನ್ನನ್ನು ಇಲ್ಲಿಂದಲೂ ತೆಗೆದುಕೊಂಡು ಹೋಗಿ ಬೇರೆಲ್ಲಿಯಾದರೂ ಇರಿಸಿ' ಎಂದು ಚಡಪಡಿಸುತ್ತಾನೆ. ಅವನ ಸ್ವಭಾವ ಅನಂತವಾದುದರಿಂದ ಅನಂತದಲ್ಲಿಯೇ ಅವನಿಗೆ ಆತ್ಯಂತಿಕ ಸುಖ. ನಮ್ಮಲ್ಲಿ ಆಧ್ಯಾತ್ಮಿಕ ಜಾಗೃತಿಯುಂಟಾದಾಗ, ಬಂಧನದ ಅರಿವು ನಮಗಾಗುತ್ತದೆ.

ಒಬ್ಬನು ನಿದ್ರೆ ಮಾಡುತ್ತಿರುವಾಗ ಅವನನ್ನು ಮಂಚಕ್ಕೆ ಕಟ್ಟಿಹಾಕಿದರೆ, ಎಚ್ಚೆತ್ತಾಗಲೇ ಅವನಿಗೆ ಅದರ ಅರಿವಾಗುತ್ತದೆ. ಆಗ ಚಡಪಡಿಸುತ್ತಾನೆ. ಬದ್ಧಜೀವಿಯು ಇನ್ನೂ ನಿದ್ರೆಯಲ್ಲಿದ್ದಾನೆ.

## ಶ್ರದ್ಧೆಯೇ ಸರ್ವಸ್ವ

ಶ್ರೀರಾಮಕೃಷ್ಣರು ಮಾತನ್ನು ಮುಂದುವರಿಸುತ್ತ ಶ್ರದ್ಧೆಯ ಕುರಿತಾಗಿ ಹೇಳುತ್ತಾರೆ: ''ಶ್ರದ್ಧೆಯುಂಟಾಗಿಬಿಟ್ಟಿತು ಎಂದರೆ ಎಲ್ಲವೂ ದೊರೆತ ಹಾಗೆ. ಶ್ರದ್ಧೆಗಿಂತ ಮಿಗಿಲಾದುದು ಯಾವುದೂ ಇಲ್ಲ. ಶ್ರದ್ಧೆಯ ಶಕ್ತಿ ಎಷ್ಟು ಜೋರಾದದ್ದು ಗೊತ್ತೆ! ಪುರಾಣದಲ್ಲಿ ಹೇಳಿದೆ: ಸಾಕ್ಷಾತ್ ಪೂರ್ಣಬ್ರಹ್ಮ ಶ್ರೀರಾಮಚಂದ್ರ ಲಂಕೆಗೆ ಹೋಗಲು ಸೇತುವೆ ಕಟ್ಟಬೇಕಾಗಿ ಬಂತು. ಆದರೆ ಹನುಮಂತ ರಾಮನಾಮದಲ್ಲಿ ಶ್ರದ್ಧೆಯಿಟ್ಟು ಒಂದೇ ನೆಗೆತಕ್ಕೆ ಸಮುದ್ರ ದಾಟಿ ಆಚೆ ದಡ ತಲುಪಿದ! ಆತನಿಗೆ ಸೇತುವೆ ಏನೂ ಬೇಕಾಗಲೇ ಇಲ್ಲ.'' ಹನುಮಂತನು ಸಮುದ್ರ ದಾಟುವಾಗ ರಾಮಬಾಣದಂತೆ ಹಾರಿದನು ಎಂದು ಹೇಳಲಾಗಿದೆ. ಅಂದರೆ ಅವನು ತನ್ನ ಶಕ್ತಿಯಿಂದ ಹಾರಿದುದಲ್ಲ, ರಾಮನ ಶಕ್ತಿಯಿಂದ. ಬಾಣ ಹಾರುವುದು ಬಾಣದ ಶಕ್ತಿಯಿಂದಲ್ಲ, ಬಾಣ ಬಿಟ್ಟವನ ಶಕ್ತಿಯಿಂದ ತಾನೆ. ದೃಢವಾದ ಶ್ರದ್ಧೆಯಿದ್ದರೆ ಭಗವತ್ ಶಕ್ತಿ ನಮ್ಮಲ್ಲಿ ಕೆಲಸ ಮಾಡುತ್ತದೆ ಎಂದರ್ಥ.

ಬೈಬಲ್‌ನಲ್ಲಿ ಬರುವ ಹೇಳಿಕೆ ಇಲ್ಲಿ ಸ್ಮರಣಾರ್ಹ: ''ನಾವು ನಡೆಯುವುದು ಶ್ರದ್ಧಾಶಕ್ತಿಯಿಂದ, ದೃಷ್ಟಿಶಕ್ತಿಯಿಂದಲ್ಲ.'' (We walk by faith, not by sight). ವ್ಯಾಸರು ತಮ್ಮ ಯೋಗಸೂತ್ರಭಾಷ್ಯದಲ್ಲಿ ಶ್ರದ್ಧೆಯ ಬಗ್ಗೆ ಹೀಗೆ ಹೇಳುತ್ತಾರೆ: **ಸಾ ಹಿ ಜನನೀ ಇವ ಕಲ್ಯಾಣೀ ಯೋಗಿನಂ ಪಾತಿ**–''ಶ್ರದ್ಧೆಯು ಸದ್ಗುಣಸಂಪನ್ನಳಾದ ತಾಯಿಯಂತೆ ಯೋಗಿಯನ್ನು ರಕ್ಷಿಸುತ್ತಾಳೆ.'' ಶ್ರದ್ಧೆಯಲ್ಲಿ ಎಲ್ಲ ಸದ್ಗುಣಗಳು ಅಡಕವಾಗಿವೆ ಎಂಬುದೂ ಇದರ ಇಂಗಿತಾರ್ಥ. ಶ್ರೀಶಂಕರಾಚಾರ್ಯರು ಶ್ರದ್ಧೆಯನ್ನು 'ಆಸ್ತಿಕ್ಯಬುದ್ಧಿ' (Possitive attitude) ಎಂದು ಕರೆಯುತ್ತಾರೆ. ಎಲ್ಲವನ್ನೂ ಒಂದು ಸಕಾರಾತ್ಮಕ ದೃಷ್ಟಿಯಿಂದ ನೋಡುವ ಮನೋಭಾವವನ್ನು ಶ್ರದ್ಧೆ ಎಂದು ಕರೆಯಬಹುದು. ''ಇದು ಸಾಧ್ಯ'' ಎಂಬ ಮನೋಭಾವವೇ ಸಾಧನೆಗೆ ಹೆಚ್ಚು ಪುಷ್ಟಿಯನ್ನು ನೀಡುತ್ತದೆ. 'ಇದು ತುಂಬ ಕಷ್ಟ' ಎಂಬ ಸಪ್ಪೆಯ ಮನೋಭಾವವೇ ಸಾಧನೆಗೆ ಅಡಚಣೆಯಾಗುತ್ತದೆ. ಅನೇಕರು, 'ಇದೆಲ್ಲ ಅವತಾರಪುರುಷರಿಗೆ, ಸಂತಶ್ರೇಷ್ಠರಿಗೆ ಮಾತ್ರ ಸಾಧ್ಯ' ಎಂದು ಭಾವಿಸುತ್ತ ನಿರುತ್ಸಾಹಿಗಳಾಗುತ್ತಾರೆ. 'ಹೇಳುವುದು ಸುಲಭ ಆಚರಿಸುವುದು ಕಷ್ಟ' — ಎಂಬ ಭಾವನೆ ಶ್ರದ್ಧೆಯ ಕೊರತೆಯನ್ನು ಸೂಚಿಸುತ್ತದೆ. ಇದೇ ಆಚರಣೆಗೆ ಒಂದು ತಡೆಯಾಗುತ್ತದೆ, 'ತಾನೇ ಆಚರಿಸುವುದಿಲ್ಲ. ನಮಗೆ ಹೇಳುವುದಕ್ಕೆ ಬರುತ್ತಾನೆ' — ಇದೂ ಸಂದೇಹ ಮನಸ್ಸಿನ ಲಕ್ಷಣ. ಶ್ರದ್ಧೆಯುಳ್ಳವನು ಒಳ್ಳೆಯ ವಿಚಾರವನ್ನು ಯಾರಿಂದ ಬೇಕಾದರೂ ಸ್ವೀಕರಿಸುತ್ತಾನೆ.

## ಸಮಾಧಿಯಲ್ಲಿ ಶ್ರೀರಾಮಕೃಷ್ಣರು

ಈಗ ಶ್ರೀರಾಮಕೃಷ್ಣರ ಸಮಾಧಿಯ ಅದ್ಭುತ ವರ್ಣನೆ ಬರುತ್ತದೆ: ''ಶ್ರೀರಾಮಕೃಷ್ಣರು ಸ್ಥಿರವಾಗಿ ನಿಂತಿದ್ದಾರೆ. ನರೇಂದ್ರ ಹಾಡುತ್ತಿದ್ದಾನೆ. ಹತ್ತಿರವೇ ನಾಲ್ಕೈದು ಜನ ಭಕ್ತರು ನಿಂತಿದ್ದಾರೆ. ಪರಮಹಂಸರನ್ನು ಬಿಟ್ಟರೆ ಇಷ್ಟು ಮಧುರವಾಗಿ ಹಾಡುವುದನ್ನು ಆತ ('ಮ') ಕೇಳಿರಲಿಲ್ಲ. ಹಾಗೇ ಪರಮಹಂಸರ ಕಡೆ ನೋಡಿ ಆಶ್ಚರ್ಯಚಕಿತನಾಗಿ ನಿಂತುಕೊಂಡ. ಅವರು ಎವೆಯಿಕ್ಕದೆ ನೆಟ್ಟ ಕಣ್ಣುಗಳಿಂದ ಸ್ಥಿರವಾಗಿ ನಿಂತಿದ್ದಾರೆ. ಉಸಿರಾಡುತ್ತಿರುವಂತೆಯೂ ತೋರಿ ಬರಲಿಲ್ಲ. ಕೇಳಲಾಗಿ ಒಬ್ಬ ಭಕ್ತ ಹೇಳಿದ, ಪರಮಹಂಸರು ಸಮಾಧಿಯಲ್ಲಿದ್ದಾರೆ, ಎಂದು. ಮಾಸ್ಟರ್(ಮ) ಇಂಥದ್ದನ್ನು ಎಂದೂ ನೋಡಿಯೂ ಇರಲಿಲ್ಲ, ಕೇಳಿಯೂ ಇರಲಿಲ್ಲ. ವಿಸ್ಮಯಗೊಂಡು ಭಾವಿಸಲಾರಂಭಿಸಿದ: ''ಭಗವಂತನ ಧ್ಯಾನದಲ್ಲಿರುವಾಗ ಮನುಷ್ಯ ಇಷ್ಟರಮಟ್ಟಿಗೆ ಬಾಹ್ಯಶೂನ್ಯನಾಗಲು ಸಾಧ್ಯವೆ? ಎಂಥಮಟ್ಟದ ಶ್ರದ್ಧಾಭಕ್ತಿಗಳಿದ್ದರೆ ಈ ರೀತಿಯ ಅವಸ್ಥೆ ಬರುತ್ತದೆ!''

ಶ್ರೀರಾಮಕೃಷ್ಣರಿಗೆ ಸಮಾಧಿ ಅತ್ಯಂತ ಸಹಜವಾಗಿತ್ತು. ಸ್ವಲ್ಪ ಸೂಚನೆ ಸಿಕ್ಕಿದರೆ ಸಾಕು ಮನಸ್ಸು ಥಟ್ಟನೆ ಸಮಾಧಿ ಸ್ಥಿತಿಗೆ ಹಾರಿಬಿಡುತ್ತಿತ್ತು. ಅವರ ಮನಸ್ಸು ಒಣಗಿದ ಬೆಂಕಿಪೆಟ್ಟಿಗೆಯಂತೆ, ಸ್ವಲ್ಪ ಗೀರಿದರೆ ಸಾಕು ಹತ್ತಿಕೊಂಡುಬಿಡುತ್ತದೆ. ಸಮಾಧಿಯೆಂದರೆ ಇಂದ್ರಿಯಾತೀತ ಪ್ರಜ್ಞಾತೀತ ಅನುಭವದ ಸ್ಥಿತಿ. ಮೂರು ಅವಸ್ಥೆಗಳನ್ನು ಗುರುತಿಸಲಾಗಿದೆ; ಅಪ್ರಜ್ಞೆ, ಪ್ರಜ್ಞೆ ಮತ್ತು ಅತೀತಪ್ರಜ್ಞೆ ಅಥವಾ ಪ್ರಜ್ಞಾತೀತ — ಅಪ್ರಜ್ಞೆಯಲ್ಲಿ ಎಲ್ಲವೂ ನಮ್ಮ ಅರಿವಿಲ್ಲದೆ ನಡೆಯುತ್ತದೆ. ಇಲ್ಲಿ ನಾವು ಪ್ರಜ್ಞಾಪೂರ್ವಕವಾಗಿ, ಇಚ್ಛಾಪೂರ್ವಕವಾಗಿ ಮಾಡುವುದಿಲ್ಲ. ಹೆಚ್ಚಾಗಿ ಪ್ರಾಣಿಗಳು ಈ ಸ್ಥಿತಿಯಲ್ಲಿರುತ್ತವೆ. ಇದನ್ನೇ ಇಂಗ್ಲಿಷಿನಲ್ಲಿ instinct ಅಥವಾ unconscious ಎಂದು ಕರೆಯುವುದು. ಮನುಷ್ಯನಲ್ಲಿಯೂ ಅನೇಕ ಕ್ರಿಯೆಗಳು ಅಪ್ರಜ್ಞಾಪೂರ್ವಕವಾಗಿಯೇ ನಡೆಯುತ್ತವೆ. ಅನೇಕರು ಎಷ್ಟೊಂದು ಯಾಂತ್ರಿಕರಾಗಿರುತ್ತಾರೆಂದರೆ, ತಾವೇನು ಮಾಡುತ್ತಿದ್ದೇವೆ, ಎಂಥೆಂಥ ಆಲೋಚನೆಗಳು ಮನಸ್ಸಿನಲ್ಲಿ ನಡೆಯುತ್ತಿವೆ ಎಂಬುದರ ಅರಿವೇ ಅವರಿಗೆ ಇರುವುದಿಲ್ಲ. ಮನುಷ್ಯನು ಹೆಚ್ಚು ಪ್ರಜ್ಞೆಯ ಸ್ಥಿತಿಯಲ್ಲಿ ಇರುವುದನ್ನು ಕಲಿಯಬೇಕು. ಇದೇ ಮನುಷ್ಯತ್ವದ ಲಕ್ಷಣ. ಆತ್ಮಪ್ರಜ್ಞೆಯನ್ನು ವೃದ್ಧಿಗೊಳಿಸಬೇಕು. ಆಗಲೇ ವ್ಯಕ್ತಿಯು ಅಧ್ಯಾತ್ಮದಲ್ಲಿ ಮುಂದುವರಿಯುತ್ತಾನೆ. ಮುಂದೆ ಆತ್ಯಂತಿಕವಾಗಿ ಪ್ರಜ್ಞೆಯನ್ನೂ ಮೀರಿಹೋಗುತ್ತಾನೆ. ಇದೇ ಪ್ರಜ್ಞಾತೀತ ಸ್ಥಿತಿ, ಉನ್ನತ ಸಮಾಧಿಸ್ಥಿತಿ. ಇದನ್ನೇ ಇಂಗ್ಲಿಷಿನಲ್ಲಿ mystical experience ಎಂದೂ ಇದಕ್ಕೆ ಸಂಬಂಧಪಟ್ಟ ವಿಷಯವನ್ನು mysticism ಎಂದೂ

ಕರೆಯುವುದು. ‘‘ಪ್ರಪಂಚಾತೀತ ಸತ್ಯದ ಪ್ರತ್ಯಕ್ಷವೂ ನೇರವೂ, ಮಾಧ್ಯಮರಹಿತವೂ (ಅಪರೋಕ್ಷವೂ), ವಿಚಾರಾತೀತವೂ (intuitive) ಆತ್ಮಪರಿವರ್ತಕವೂ ಆದ ಅನುಭವ’’— ಎಂದು ಸಾಲ್ವಿನೋ ಅಜ಼ಪರ್ಡ್ ಎಂಬ ಕ್ರಿಶ್ಚಿಯನ್ ಚಿಂತಕರೊಬ್ಬರು ಇದರ ನಿರ್ವಚನವನ್ನು ನೀಡಿದ್ದಾರೆ. ಈ ಅನುಭವದ ಕೆಲವು ಲಕ್ಷಣಗಳನ್ನು ಜೋಚಿಮ್ ವಾಶ್ (Jochim Wach) ಎಂಬುವವರು ಸಂಗ್ರಹಿಸಿದ್ದಾರೆ :

೧) ಯಾವುದನ್ನು ಆತ್ಯಂತಿಕ ಸತ್ಯವೆಂದು ಪರಿಗಣಿಸುತ್ತೇವೆಯೊ ಅದಕ್ಕೆ ಪೂರ್ಣ ವ್ಯಕ್ತಿತ್ವವು ಸ್ಪಂದಿಸುವುದು.

೨) ಮನುಷ್ಯನಿಗೆ ಸಾಧ್ಯವಾದ ಅನುಭವಗಳಲ್ಲೆಲ್ಲ ಇದು ಅತ್ಯಂತ ತೀವ್ರವಾದುದು. ಈ ಆಧ್ಯಾತ್ಮಿಕ ವಿಧೇಯತೆ ಬೇರೆ ಎಲ್ಲ ವಿಧೇಯತೆಗಳನ್ನೂ ಗೆಲ್ಲುತ್ತದೆ.

೩) ಈ ಅನುಭವ ಎಷ್ಟು ಆಕರ್ಷಕವಾದುದೆಂದರೆ ವ್ಯಕ್ತಿಯನ್ನು ಸುಮ್ಮನೆ ಕುಳಿತುಕೊಳ್ಳಲು ಬಿಡುವುದಿಲ್ಲ.

೪) ಈ ಅನುಭವದೊಂದಿಗೆ ವ್ಯಕ್ತಿತ್ವವು ಸಂಪೂರ್ಣ ಬದಲಾವಣೆಯನ್ನು ಹೊಂದಿರುತ್ತದೆ.

೫) ಈ ಅನುಭವದ ಅತ್ಯಂತ ಮುಖ್ಯವಾದ ಲಕ್ಷಣವೆಂದರೆ, ಅದರ ನಿಶ್ಚಿತತೆ — ಆ ಅನುಭವವನ್ನು ಪಡೆದವನಿಗೆ ಅದರ ಸತ್ಯತೆಯ ಬಗ್ಗೆ ಲವಮಾತ್ರವೂ ಸಂದೇಹವಿರುವುದಿಲ್ಲ.

## ವಿವಿಧಾವಸ್ಥೆಯಲ್ಲಿ ಶ್ರೀರಾಮಕೃಷ್ಣರು

ಇನ್ನೊಂದು ದಿನ ‘ಮ’ ದಕ್ಷಿಣೇಶ್ವರಕ್ಕೆ ಹೋದಾಗ ಪರಮಹಂಸರು ತಮ್ಮ ಕೊಠಡಿಯಲ್ಲಿ ಕುಳಿತುಕೊಂಡಿದ್ದರು. ನೆಲದ ಮೇಲೆ ಮಂದಲಿಗೆ ಹಾಸಿದೆ. ಅದರ ಮೇಲೆ ನರೇಂದ್ರ, ಭವನಾಥ ಇನ್ನೂ ಕೆಲವರು ಕುಳಿತಿದ್ದಾರೆ. ಅವರೆಲ್ಲರೂ ಹತ್ತೊಂಬತ್ತು ಇಪ್ಪತ್ತು ವರ್ಷದ ಯುವಕರು. ನಗುಮುಖದಿಂದ ಪರಮಹಂಸರು ತಮ್ಮ ಮಂಚದಮೇಲೆ ಕುಳಿತು ಅವರೊಡನೆ ಆನಂದದಿಂದ ಮಾತುಕತೆಯಾಡುತ್ತಿದ್ದಾರೆ. ‘‘ಆ ಯುವಕರು ತಮ್ಮ ಸಮವಯಸ್ಕರೋ ಏನೋ ಎಂಬಂತೆ ಹುಡುಗಾಟವಾಡಲು ಆರಂಭಿಸಿಬಿಟ್ಟರು. ಹಾಸ್ಯದ ಲಹರಿ ಸುಮ್ಮನೆ ಏಳುತ್ತಿದೆ. ಆನಂದದ ಕೂಟವೇ ಆಗಿ ಕಾಣುತ್ತಿದೆ.’’

ಶ್ರೀರಾಮಕೃಷ್ಣರು ವಿವಿಧ ಅವಸ್ಥೆಗಳಲ್ಲಿ ಇರುತ್ತಿದ್ದರು. ಕೆಲವೊಮ್ಮೆ ಭಕ್ತರೊಡನೆ ಗಂಭೀರ ಆಧ್ಯಾತ್ಮಿಕ ವಿಷಯಗಳನ್ನು ಚರ್ಚಿಸುತ್ತಿದ್ದರು. ಕೆಲವೊಮ್ಮೆ ಹಾಡುತ್ತ ನರ್ತಿಸುತ್ತ ಭಾವಾವಸ್ಥೆಯಲ್ಲಿ ಮುಳುಗುತ್ತಿದ್ದರು. ಇನ್ನು ಕೆಲವೊಮ್ಮೆ ಸಮಾಧಿಯಲ್ಲಿ ಬಾಹ್ಯಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದ್ದರು. ಮತ್ತೆ ಕೆಲವೊಮ್ಮೆ ಸಾಮಾನ್ಯ ಬಾಲಕರಂತೆ ಯುವಕರೊಡನೆ ನಗುನಗುತ್ತ ಕಾಲ ಕಳೆಯುತ್ತಿದ್ದರು. ಮುಕ್ತಪುರುಷರು ಬಾಲಕರಂತೆ ವ್ಯವಹರಿಸುವು ದರ ಬಗ್ಗೆ ಶಾಸ್ತ್ರದಲ್ಲಿಯೇ ಉಕ್ತವಾಗಿದೆ.



ಶ್ರೀಶಂಕರಾಚಾರ್ಯರು ವಿವೇಕಚೂಡಾಮಣಿಯಲ್ಲಿ ಹೇಳುತ್ತಾರೆ:

> ದಿಗಂಬರೋ ವಾಽಪಿ ಚ ಸಾಂಬರೋ ವಾ
> ತ್ವಗಂಬರೋ ವಾಽಪಿ ಚ ಚಿದಂಬರಸ್ಥಃ ।
> ಉನ್ಮತ್ತವದ್ವಾಪಿ ಚ ಬಾಲವದ್ವಾ
> ಪಿಶಾಚವದ್ವಾಽಪಿ ಚರತ್ಯವನ್ಯಾಮ್ ॥ (೫೪೯)

‘‘ಜೀವನ್ಮುಕ್ತನು ದಿಗಂಬರನಾಗಿಯೋ ಸವಸ್ತ್ರನಾಗಿಯೋ ಚರ್ಮಾಂಬರನಾಗಿಯೋ ಉನ್ಮತ್ತನಾಗಿಯೋ ಅಥವಾ ಬಾಲಕನಂತೆಯೋ ಚಿದಾಕಾಶದಲ್ಲಿಯೇ ನೆಲೆಸಿರುತ್ತ ಭೂಮಿಯ ಮೇಲೆ ಚಲಿಸುತ್ತಾನೆ.’’

ಬಾಲಕಾವಸ್ಥೆಯಲ್ಲಿ ಎರಡು: ಜ್ಞಾನರಹಿತ ಮತ್ತು ಜ್ಞಾನಸಹಿತ. ಮಕ್ಕಳಲ್ಲಿ ಅಹಂಕಾರ ಇನ್ನೂ ಜಾಗೃತವಾಗಿಲ್ಲದೆ ಇರುವುದರಿಂದ ಅವರು ಬಾಲಕರಂತೆ ವರ್ತಿಸುವುದು ಸಹಜವಾಗಿಯೇ ಇದೆ. ಮುದುಕರಲ್ಲಿಯೂ ಅಹಂಕಾರವು ಹುಟ್ಟಿ ಬೆಳೆದು ಕೊಬ್ಬಿ ಮೆರೆದು ಸೋತುಹೋಗಿರುತ್ತದೆ. ಅವರು ಕೆಲವೊಮ್ಮೆ ಬಾಲಕರಂತೆ ವರ್ತಿಸುತ್ತಾರೆ. ಆದರೆ ಜ್ಞಾನಸಹಿತವಾದ ಬಾಲ್ಯಾವಸ್ಥೆಯೇ ಬೇರೆ. ಶ್ರೀರಾಮಕೃಷ್ಣರು ಅಂತಹ ಸ್ಥಿತಿಯಲ್ಲಿದ್ದರು. ಇಲ್ಲಿ ಅಹಂ ಭಗವಂತನೊಡನೆ ಒಂದಾಗಿರುತ್ತದೆ. ಇದು ಅತ್ಯಂತ ಸಹಜಾವಸ್ಥೆ. ನೈಸರ್ಗಿಕ ಬಾಲ್ಯಾವಸ್ಥೆಯಿಂದ ಆಧ್ಯಾತ್ಮಿಕ ಬಾಲ್ಯಾವಸ್ಥೆಯನ್ನು ತಲುಪಬೇಕು. ಇವೆರಡೂ ಒಂದೇ ರೀತಿ ಕಂಡುಬಂದರೂ ಇವೆರಡೂ ಬೇರೆ ಬೇರೆ ಅತಿರೇಕಗಳು — ಅತ್ಯಂತ ಮಂದ ಪ್ರಕಾಶವೂ, ಅತ್ಯಂತ ತೀವ್ರ ಪ್ರಕಾಶವೂ ಕತ್ತಲೆ ಯಾಗಿರುವಂತೆ.

## ವಾದ ಬೇಡ

ಶ್ರೀರಾಮಕೃಷ್ಣರು ‘ಮ’ ಮತ್ತು ನರೇಂದ್ರನನ್ನು ಸಂಬೋಧಿಸಿ ಹೇಳುತ್ತಿದ್ದಾರೆ. ‘‘ನೀವಿಬ್ಬರೂ ಇಂಗ್ಲೀಷಿನಲ್ಲಿ ಸಂಭಾಷಿಸಿ, ವಾದಮಾಡಿ. ನಾನು ಆಲಿಸುತ್ತೇನೆ.’’ ಅವರಿಬ್ಬರೂ ಸ್ವಲ್ಪ ನಕ್ಕು

ಸಂಭಾಷಣೆಯನ್ನು ಪ್ರಾರಂಭಿಸಿದರು — ಆದರೆ ಬಂಗಾಳಿಯಲ್ಲೇ. ಇದು ಸ್ವಲ್ಪ ಹೊತ್ತು ಮಾತ್ರ ಮುಂದುವರಿಯಿತು. ‘ಮ’ ಶ್ರೀರಾಮಕೃಷ್ಣರ ಮುಂದೆ ವಾದ ಮಾಡುವ ಪ್ರಶ್ನೆಯೇ ಇಲ್ಲ. ಅವರಾಗಲೇ ವಾದಕ್ಕೆ ತಿಲಾಂಜಲಿ ಇತ್ತಿದ್ದರು. ಪರಮಹಂಸರ ಕೃಪೆಯಿಂದ ಅವರ ತಾರ್ಕಿಕ ಪ್ರವೃತ್ತಿಗೆ ಬೀಗಮುದ್ರೆ ಬಿದ್ದಿತು. ತುಂಬ ವಿಚಾರ ಮಾಡುತ್ತ ಹೋದರೆ ನಾಸ್ತಿಕಭಾವ ಬಂದುಬಿಡುತ್ತದೆ ಎಂದು ಪರಮಹಂಸರು ಎಚ್ಚರಿಕೆ ನೀಡಿದ್ದರು. **ನೈಷಾ ತರ್ಕೇಣ ಮತಿರಾಪನೇಯಾ** — ‘‘ಈ ಆತ್ಮಜ್ಞಾನವನ್ನು ತರ್ಕದಿಂದ ಪಡೆಯಲಾಗುವುದಿಲ್ಲ,’’ ಎಂದು ಶ್ರುತಿ ಹೇಳುತ್ತದೆ. **ವಾದೋ ನಾವಲಂಬ್ಯಃ, ಬಾಹುಲ್ಯ ಅವಕಾಶತ್ವಾತ್ ಅನಿಯತತ್ವಾಚ್ಚ ।** — ‘‘ವಾದವನ್ನು ಅವಲಂಬಿಸಲೇಬಾರದು. ಏಕೆಂದರೆ ಅದಕ್ಕೆ ಕೊನೆಮೊದಲಿಲ್ಲ ಹಾಗೂ ಅದರಿಂದ ಯಾವುದೇ ಒಂದು ನಿಶ್ಚಯಕ್ಕೂ ಬರಲಾಗುವುದಿಲ್ಲ’’ ಎಂದು ನಾರದರು ಹೇಳುತ್ತಾರೆ (ಭಕ್ತಿಸೂತ್ರ): ‘ವಾದವು ಕಾರ್ಯ ಕಾರಣ ಸಂಬಂಧವನ್ನು ಅವಲಂಬಿಸಿರುತ್ತದೆ.’ ಆದರೆ ಕಾರ್ಯಕಾರಣ ಸಂಬಂಧವು ಅನಿರ್ದಿಷ್ಟ. ಇದಕ್ಕೆ ಸಂಬಂಧಪಟ್ಟಂತೆ ಅನೇಕ ವಾದಗಳಿವೆ. ವೇದಾಂತಿಗಳು ಮತ್ತು ಸಾಂಖ್ಯರು ಸತ್ಕಾರ್ಯವಾದವನ್ನು ಅಂದರೆ ಕಾರ್ಯವು ಕಾರಣದಲ್ಲಿ ಆಗಲೇ ಇದೆ, ಕಾರ್ಯವು ಕಾರಣದ ಇನ್ನೊಂದು ರೂಪ — ಎಂದು ಒಪ್ಪುತ್ತಾರೆ. ವೈಶೇಷಿಕ ಮುಂತಾದವರು, ಕಾರ್ಯವು ಕಾರಣದಲ್ಲಿ ಆಗಲೇ ಇಲ್ಲ, ಇದೊಂದು ಹೊಸ ಉತ್ಪನ್ನ ಎಂಬ ಆರಂಭವಾದವನ್ನು ಒಪ್ಪುತ್ತಾರೆ. ಕಾರ್ಯವು ಕಾರಣದ ಪರಿಣಾಮ ಎಂಬ ಪರಿಣಾಮವಾದವನ್ನು ಮತ್ತೆ ಕೆಲವರು ಒಪ್ಪುತ್ತಾರೆ. ಹೀಗೆ ಈ ವಿಷಯದಲ್ಲಿ ಅನೇಕ ವಾದವಿವಾದಗಳು ಇವೆ.

ವಾದ ಮಾಡುವುದೆಂದರೆ ಇನ್ನೊಬ್ಬರ ಬಾಯಿ ಮುಚ್ಚಿಸುವುದೇ ಪ್ರಧಾನವಾಗಿರುತ್ತದೆ — ತನ್ನದೇ ಕೊನೆಯ ಮಾತಾಗಬೇಕೆಂಬ ಹಠ. ಸದಾಶಿವ ಬ್ರಹ್ಮೇಂದ್ರರ ಜೀವನಕ್ಕೆ ಸಂಬಂಧಪಟ್ಟಂತೆ ಒಂದು ಸ್ವಾರಸ್ಯಕರ ಘಟನೆ ಇದೆ. ಅವರು ಪ್ರಕಾಂಡ ಪಂಡಿತರು. ಎಲ್ಲರೊಡನೆಯೂ ವಾದಮಾಡಿ ಬಾಯಿಮುಚ್ಚಿಸುತ್ತಿದ್ದರು. ಒಂದು ದಿನ ಅವರ ಗುರು ಹೇಳಿದರಂತೆ: ‘‘ನೀನು ಎಲ್ಲರ ಬಾಯಿ ಮುಚ್ಚಿಸುತ್ತಿರುವೆ. ಆದರೆ ನೀನು ಬಾಯಿ ಮುಚ್ಚುವುದು ಯಾವಾಗ?’’ ಎಂದು. ಆ ದಿನ ಮುಚ್ಚಿದ ಬಾಯನ್ನು ಸದಾಶಿವ ಬ್ರಹ್ಮೇಂದ್ರರು ಮತ್ತೆ ತೆರೆಯಲಿಲ್ಲವಂತೆ. ಶ್ರೀವಿದ್ಯಾರಣ್ಯರು ‘ಪಂಚದಶಿ’ಯಲ್ಲಿ ಹೇಳಿದ ಮಾತು ಇಲ್ಲಿ ಸ್ಮರಣಾರ್ಹ *(೬.೩೦)*:

**ಬುದ್ಧ್ಯಾರೋಹಾಯ ತರ್ಕಶ್ಚೇತ್ ಅಪೇಕ್ಷೇತ ತಥಾ ಸತಿ ।**
**ಸ್ವಾನುಭೂತ್ಯನುಸಾರೇಣ ತರ್ಕ್ಯತಾಂ ಮಾ ಕುತರ್ಕ್ಯತಾಮ್ ॥**

‘‘ಒಂದು ವಿಷಯದಲ್ಲಿ ದೃಢಭಾವವನ್ನು ಪಡೆಯಲು ತರ್ಕದ ಆವಶ್ಯಕತೆ ಇದ್ದರೆ ಅದನ್ನು ಇಟ್ಟುಕೊಳ್ಳಿ. ಆದರೆ ಸ್ವಂತ ಅನುಭವದ ಆಧಾರದ ಮೇಲೆ ತರ್ಕಮಾಡಿ, ಕುತರ್ಕ ಮಾಡಬೇಡಿ.’’

## ಸ್ವಾತಂತ್ರ್ಯಪ್ರಿಯತೆ

ಶ್ರೀರಾಮಕೃಷ್ಣರು ನರೇಂದ್ರನ ಕುರಿತಾಗಿ ಮಾತನಾಡುತ್ತ ಹೇಳಿದರು: ‘‘ನೋಡಿ, ರೈತರು ಜಾತ್ರೆಗೆ ಹೋರಿಗಳನ್ನು ಕೊಂಡುಕೊಂಡುಬರಲು ಹೋಗುತ್ತಾರೆ. ಅವರು ಒಳ್ಳೆಯದಾವುದು, ಕೆಟ್ಟದಾವುದು ಎಂಬುದನ್ನು ಸರಿಯಾಗಿ ಗುರುತಿಸಬಲ್ಲರು. ಬಾಲದ ಹತ್ತಿರ ಕೈಯಿಟ್ಟು ನೋಡುತ್ತಾರೆ, ಕೆಲವು ಹೋರಿ ಆಗ ಸುಮ್ಮನೆ ಬಿದ್ದುಕೊಳ್ಳುತ್ತವೆ. ಅಂಥವನ್ನು ಕೊಂಡುಕೊಳ್ಳುವುದಿಲ್ಲ. ಬಾಲದ ಹತ್ತಿರ ಕೈಯಿಟ್ಟೊಡನೆಯೇ ಯಾವ ಹೋರಿ ಕೈಕಾಲು ಒದರಿ ಮೊರಗುಟ್ಟುತ್ತ ತಿವಿಯಲು ಬರುವುದೋ ಅಂಥವು ಅವರಿಗೆ ಹಿಡಿಸುತ್ತದೆ. ನರೇಂದ್ರ ಈ ಗುಂಪಿಗೆ ಸೇರಿದ ಹೋರಿ. ಆಂತರ್ಯದಲ್ಲಿ ಒಳ್ಳೇ ತಿರುಳಿದೆ.’’ ಹೀಗೆಂದು ಹೇಳಿ ಪರಮಹಂಸರು ನಗಲಾರಂಭಿಸಿದರು. ಮತ್ತೆ ಹೇಳುತ್ತಿದ್ದಾರೆ, ‘‘ಕೆಲಕೆಲವರಿದ್ದಾರೆ, ಹಾಲಿನಲ್ಲಿ ನೆಂದ ಅವಲಕ್ಕಿ ಹಾಗೆ — ಸಾಹಸವಿಲ್ಲ, ಜೋರಿಲ್ಲ, ನಸೆನಸೆ ಅನ್ನುತ್ತಿರುತ್ತಾರೆ.’’

ಮೇಲಿನ ಎರಡು ಉದಾಹರಣೆಗಳಲ್ಲಿ ಎರಡು ಅಂಶ ನಮ್ಮ ಗಮನಕ್ಕೆ ಬರುತ್ತವೆ. ಮೊದಲನೆಯದಾಗಿ ಸ್ವಾತಂತ್ರ್ಯಪ್ರಿಯತೆ: ಕೈಕಾಲು ಒದರಿ ತಿವಿಯಲು ಬರುವ ಹೋರಿ ಇತರರು ತನ್ನ ಮೇಲೆ ಪ್ರಭುತ್ವ ಸಾಧಿಸುವುದನ್ನು ಇಷ್ಟಪಡುವುದಿಲ್ಲ. ನರೇಂದ್ರನು ಹಾಗೆಯೇ, ಅತ್ಯಂತ ಸ್ವಾತಂತ್ರ್ಯಪ್ರಿಯ. ಎಲ್ಲರೂ ಸ್ವಾತಂತ್ರ್ಯಪ್ರಿಯರೇ, ತಮ್ಮ ಇಚ್ಛಾನುಸಾರ ವರ್ತಿಸಲು ಅವರಿಗೆ ಸ್ವಾತಂತ್ರ್ಯವಿರಬೇಕು. ಇದು ಸ್ವೇಚ್ಛಾಚಾರ, ಅಷ್ಟೆ. ಅವರಿಗೆ ತಿಳಿಯದು, ತಾವು ತಮ್ಮ ಇಂದ್ರಿಯ, ಮನಸ್ಸು, ಆಸೆ ಮುಂತಾದವುಗಳಿಗೆ ಎಷ್ಟೊಂದು ದಾಸರಾಗಿರುತ್ತಾರೆ ಎಂಬುದು. ಅವರು ಬಯಸುವುದು ಇಂದ್ರಿಯ ಸ್ವಾತಂತ್ರ್ಯವನ್ನು, ಇಂದ್ರಿಯಗಳಿಂದ ಸ್ವಾತಂತ್ರ್ಯವನ್ನಲ್ಲ. ಒಂದು ಸಾಕುನಾಯಿ ಬೀದಿನಾಯಿಯೊಂದಿಗೆ ಮಾತನಾಡುತ್ತಿತ್ತು. ಸಾಕು ನಾಯಿ ಹೇಳಿತು, ‘‘ನೋಡ್ದ್ಯೇನೋ! ನಾನು ನನ್ನ ಯಜಮಾನನ್ನು ಸರಿಯಾಗಿ ಪಳಗಿಸಿದ್ದೇನೆ,’’ ಎಂದು. ‘‘ಹೌದಾ! ಅದು ಹೇಗೆ?’’ ಎಂದು ಬೀದಿನಾಯಿ ದೊಡ್ಡದಾಗಿ ಬಾಯಿಕಳೆದು, ಕಣ್ಣಗಲಿಸಿತು. ಸಾಕುನಾಯಿ ಹೇಳಿತು: ‘‘ನಾನು ಚೆಂಡು ತಂದುಕೊಟ್ಟ ಕೂಡಲೇ ಯಜಮಾನ ಒಂದು ಬಿಸ್ಕತ್ ಕೊಡಲೇ ಬೇಕು. ಆ ರೀತಿ ಅವನಿಗೆ ಟ್ರೈನಿಂಗ್ ಕೊಟ್ಟಿದ್ದೇನೆ.’’ ಹೀಗೆಯೇ ಜನ ತಿಳಿದುಕೊಂಡಿರುತ್ತಾರೆ ಇಂದ್ರಿಯಗಳು ತಮ್ಮ ಹಿಡಿತದಲ್ಲಿವೆ ಎಂದು. ಆದರೆ ಅವರಿಗೆ ತಿಳಿಯದು, ತಾವು ಎಷ್ಟೊಂದು ಇಂದ್ರಿಯಗಳಿಗೆ ದಾಸರು ಎಂಬುದು. ಆಸೆ ಮುಂತಾದವುಗಳು ನಮ್ಮ ಮೇಲೆ ಪ್ರಭುತ್ವ ಸಾಧಿಸಬಾರದು. ಅಂಥ ಸ್ವಾತಂತ್ರ್ಯವನ್ನು ನಾವು ಇಷ್ಟಪಡಬೇಕು. ನಮ್ಮೊಳಗೇ ನಾವು ಯಜಮಾನನಾಗಿರಬೇಕು, ಇದೇ ಸ್ವಾರಾಜ್ಯ ಪ್ರಾಪ್ತಿ.